# ರಾಜಿ ಸಂಧಾನ..?





‘ಅಲಿಯಾ ಭಟ್ ಬಹಳ ಒಳ್ಳೆಯ ಕೆಲಸ ಮಾಡ್ತಿದಾಳೆ. ನಿಜಕ್ಕೂ ಅವಳ ನಟನೆ ನೋಡಿ ನಾನೂ ಸ್ಫೂರ್ತಿ ಪಡೆದಿದ್ದೇನೆ!’

–ಶ್ರದ್ಧಾ ಕಪೂರ್ ಸಂದರ್ಶನವೊಂದರಲ್ಲಿ ಹೇಳಿದ ಈ ಮಾತುಗಳನ್ನು ಕೇಳಿ ಬಾಲಿವುಡ್ ಪಂಡಿತರು ಬಾಂಬ್ ಬಿದ್ದಂತೆ ವರ್ತಿಸುತ್ತಿದ್ದಾರೆ. ಹಾವು ಮುಂಗುಸಿಗಳಂತೆ ಕಾದಾಡುತ್ತಿದ್ದ ಶ್ರದ್ಧಾ ಮತ್ತು ಅಲಿಯಾ ಇಬ್ಬರ ಮಧ್ಯೆ ರಾಜಿ ಸಂಧಾನವೇನಾದರೂ ಆಗಿದೆಯೆ ಎಂದು ಪತ್ರಕರ್ತರು ಹುಡುಕಾಡುತ್ತಿದ್ದಾರೆ.

ಇದಕ್ಕೂ ಮುನ್ನ ‘ಓಕೆ ಜಾನೂ’ ಚಿತ್ರದ ಟ್ರೇಲರ್ ನೋಡಿ ಅಲಿಯಾ ಭಟ್ ಕೂಡಾ ಶ್ರದ್ಧಾಳನ್ನು ಬಾಯ್ತುಂಬ ಹೊಗಳಿದ್ದು ವರದಿಯಾಗಿತ್ತು. ‘ಎಷ್ಟು ಚೆನ್ನಾಗಿ ನಟಿಸಿದ್ದಾಳೆ ಶ್ರದ್ಧಾ. ಟ್ರೇಲರ್ ನೋಡಿಯೇ ಥ್ರಿಲ್ ಆಗಿದ್ದೇನೆ’ ಎನ್ನುವುದು ಅಲಿಯಾಳ ಟ್ವೀಟ್ ಆಗಿತ್ತು!

ಸದ್ಯಕ್ಕಂತೂ ಶ್ರದ್ಧಾ ನಟನೆಯ ಅತ್ಯುತ್ತಮ ಅವಕಾಶಗಳನ್ನು ಪಡೆಯುತ್ತಿದ್ದಾಳೆ. ಆಕೆ ಅರ್ಜುನ್ ಕಪೂರ್ ಜತೆಗೆ ನಟಿಸಿರುವ ‘ಹಾಫ್ ಗರ್ಲ್‌ಫ್ರೆಂಡ್’ ಭಾರೀ ನಿರೀಕ್ಷೆಗಳನ್ನು ಹುಟ್ಟಿಸಿದೆ.

ಶ್ರದ್ಧಾ ಮಾತುಗಳು ಎಷ್ಟು ಅಮಾಯಕವೆಂಬಂತಿವೆ ನೋಡಿ: ‘ಇಬ್ಬರು ನಟಿಯರು ಒಳ್ಳೆಯ ಗೆಳತಿಯರಾಗಲು ಸಾಧ್ಯವಿಲ್ಲ ಎಂದೇಕೆ ಭಾವಿಸುತ್ತೀರಿ? ಅಭಿನಯಕ್ಕೆ ಅವಕಾಶ ಇರುವ ಪಾತ್ರ ಸಿಕ್ಕಿದರೆ ನಾನು ಅಲಿಯಾ ಜತೆಗೆ ನಟಿಸಲೂ ಸಿದ್ಧಳಿದ್ದೇನೆ!’

ಸದ್ಯಕ್ಕೆ ಬಾಲಿವುಡ್‌ನಲ್ಲಿ ತೀವ್ರ ಪೈಪೋಟಿಗಿಳಿದಿರುವ ಈ ಇಬ್ಬರು ನಟಿಯರ ನಡುವೆ ಏನು ನಡೆದಿದೆ ಎನ್ನುವುದು ಮುಂದಿನ ದಿನಗಳಲ್ಲಿ ಬಹಿರಂಗವಾಗಬಹುದು. ಸದ್ಯದ ಕದನ ವಿರಾಮ ಶೀಘ್ರದಲ್ಲೇ ಉಲ್ಲಂಘನೆಯಾಗಿ ಮತ್ತೆ ಸಿಡಿಲು ಮಿಂಚುಗಳ ಅಬ್ಬರವೂ ಕಾಣಿಸಬಹುದು. ಇಬ್ಬರ ವೇಗ ನೋಡಿದರೆ ಯಾವುದೂ ಅಸಂಭವವಲ್ಲ.

ಆದರೆ ಸೆಲೆಬ್ರಿಟಿ ಸ್ಥಾನಮಾನದಿಂದ ತನ್ನ ವೈಯಕ್ತಿಕ ಇಷ್ಟಾನಿಷ್ಟಗಳಿಗೆ, ವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಿದೆ ಎಂದು ಶ್ರದ್ಧಾ ಹೇಳಿದ್ದನ್ನು ಕೇಳಿದರೆ ನಿಜಕ್ಕೂ ಬೇಸರವಾಗುತ್ತದೆ. ‘ಬೀಚ್ ಪಕ್ಕದಲ್ಲೇ ನನ್ನ ಮನೆಯಿದೆ. ಆದರೆ ಒಬ್ಬಂಟಿಯಾಗಿ ಐಸ್‌ಕ್ರೀಮ್ ಸವಿಯುತ್ತಾ ಬೀಚ್‌ನ ಮರಳ ಮೇಲೆ ಹೆಜ್ಜೆ ಹಾಕುವಂತಿಲ್ಲ. ಈ ಸ್ಟಾರ್‌ಪಟ್ಟದಿಂದಾಗಿ ಸ್ವಾತಂತ್ರ್ಯವೇ ಇಲ್ಲದಂತಾಗಿದೆ’ ಎಂದಿದ್ದಾಳೆ ಶ್ರದ್ಧಾ.

■ ಬಿಂದು